**ಓ ಎಸ್ ನಂಃ 116/2016**
**ಡಿ ಡಬ್ಲ್ಯೂ ಃ 1**

**ದಿಃ 24.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಬಿ ವಿ ಕೆ ವಕೀಲರಿಂದಃ**

ತಾವು ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ 1 ಮತ್ತು 4 ನೇ ಪ್ರತಿವಾದಿಯು ಸರ್ವೆ ನಂ. 36/1 ರ 1 ಎಕರೆ ಜಮೀನಿಗೆ ಜಂಟಿ ಮಾಲೀಕರು ಎಂದು ಹೇಳಿ ಬರೆಸಿದ್ದೀರಿ ಎಂದರೆ ಸರಿ. ಸದರಿ ಜಮೀನಿಗೆ 1 ಮತ್ತು 4 ಪ್ರತಿವಾದಿಯು ಜಂಟಿ ಮಾಲೀಕರು ಎಂದು ಯಾವ ಆಧಾರದ ಮೇರೆಗೆ ಬರೆಸಿದ್ದೀರಿ ಎಂದರೆ ಸಾಕ್ಷಿಯು ಪಹಣಿ ಪತ್ರಿಕೆಯ ಆಧಾರದ ಮೇರೆಗೆ ಎಂದು ನುಡಿಯುತ್ತಾರೆ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಮುತ್ತಯ್ಯನವರು ದಿಃ 08.03.1976 ರಂದು ಅತನಿಗೆ ಸೇರಿದ ಎಲ್ಲಾ ಆಸ್ತಿಗಳನ್ನು ಮರಣ ಶಾಸನ ಪತ್ರದ ಮೂಲಕ ವಿಲೆ ಮಾಡಿ ಹೇಳಿ ಬರೆಸಿದ್ದೀರಿ ಎಂದರೆ ಸರಿ. 1ನೇ ಪ್ರತಿವಾದಿ ಮತ್ತು ಕೆಂಪಯ್ಯನವರು ಮುತ್ತಯ್ಯನವರ ದತ್ತು ಮಕ್ಕಳು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದಾದರೂ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಮರಣ ಶಾಸನ ಪತ್ರವನ್ನು ಹಾಜರುಪಡಿಸಿದ್ದೇನೆ. ನಿಡಿ 14 ರ ಕ್ರಯ ಪತ್ರದಲ್ಲಿ ನಮೂದು ಮಾಡಿರುವ ಷೆಡ್ಯೂಲ್ ಸ್ವತ್ತು ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಿಡಿ 14 ರ ದಾಖಲಾತಿಯಲ್ಲಿ ಚಲುವಪ್ಪನವರ ಸಹಿ ಇಲ್ಲ ಎಂದರೆ ಸಾಕ್ಷಿಯು ಮೂಲ ಪ್ರತಿಯಲ್ಲಿ ಅವರ ಸಹಿ ಇದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಿಡಿ 15 ಮತ್ತು 16 ರ ದಾಖಲಾತಿಯನ್ನು ತಾವು ಈ ದಾವೆಗೋಸ್ಕರ ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ವಿಚಾರ ಪಹಣಿ ಪತ್ರಿಕೆಗಳಲ್ಲಿ ಯಾವತ್ತೂ ಸಹ ನಮೂದಾಗಿಲ್ಲ ಎಂದರೆ ಸರಿ. ನಿಡಿ 17 ರ ಪ್ರಕಾರ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ 1 ನೇ ಪ್ರತಿವಾದಿ ಮತ್ತು ತಮ್ಮ ತಾಯಿ ಯ ಹೆಸರಿನಲ್ಲಿ ಮೊದಲ ಬಾರಿಗೆ ದಾವಾ ಸ್ವತ್ತಿನ ಖಾತೆ ವರ್ಗಾವಣೆ ಆಗಿದೆ ಎಂದರೆ ಸರಿ. ನಿಡಿ 44 ರ ವಾದ ಪತ್ರದ ದೃಢೀಕೃತ ನಕಲನ್ನು ಯಾವ ಉದ್ದೇಶಕ್ಕಾಗಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ನಮ್ಮ ಜಮೀನು ನಮಗೆ ಸೇರಬೇಕೆಂದು ಚನ್ನಪ್ಪ ನವರು ದಾವೆಯನ್ನು ಹೂಡಿರುತ್ತಾರೆ. 1 ನೇ ಪ್ರತಿವಾದಿಯು ತಮ್ಮ ತಾಯಿಯವರು ದಾವಾ ಸ್ವತ್ತನ್ನು ಖಾತೆ ಮಾಡಿಸಿಕೊಂಡ ನಂತರ ಪ್ರಸ್ತುತ ದಾವೆಯನ್ನು ವಾದಿ ಯು ಸಲ್ಲಿಸಿರುತ್ತಾರೆ ಎಂದರೆ ಸರಿ. ಒಂದು ವೇಳೆ ತಾವು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವವನ್ನು ಹೊಂದಿದ್ದರೆ ನಿಡಿ 44 ರ ವಾದ ಪತ್ರದ ಷೆಡ್ಯೂಲ್ ನಲ್ಲಿ ತಮ್ಮ ಹೆಸರು ನಮೂದಾಗಬೇಕಾಗಿತ್ತು ಎಂದರೆ ಸಾಕ್ಷಿಯು ಸದರಿ

**ಓ ಎಸ್ ನಂಃ 116/2016**
**ಡಿ ಡಬ್ಲ್ಯೂ ಃ 1**

ಕೇಸಿನ ವಾದಿಯು ಈ ಕೇಸಿನ ವಾದಿಯ ಸಂಬಂಧಿಕರಾಗಿರುವ ಕಾರಣ ಉದ್ದೇಶ ಪೂರ್ವಕವಾಗಿ ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಚನ್ನಯ್ಯ ಉರುಫ್ ಚನ್ನಪ್ಪ ರವರ 4 ಜನ ಮಕ್ಕಳು ವಿಭಾಗದ ಮೂಲಕ 1973 ರಲ್ಲಿ ಚನ್ನಪ್ಪನಿಗೆ ಸೇರಿದ ಎಲ್ಲಾ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದು ನಮೂದು ಮಾಡಿದ್ದೀರಿ ಸದರಿ ದಾಖಲಾತಿಯನ್ನು ಯಾವ ದಾಖಲಾತಿಯ ಆಧಾರದ ಮೇರೆಗೆ ನಮೂದು ಮಾಡಿದ್ದೀರಿ ಎಂದರೆ ಸಾಕ್ಷಿಯು 1971 - 72 ಪಹಣಿ ಪತ್ರಿಕೆಗಳ ಆಧಾರದ ಮೇರೆಗೆ ನಮೂದು ಮಾಡಿರುತ್ತದೆ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**